ಕರ್ನಾಟಕ ಸರ್ಕಾರ

# ಆರೋಗ್ಯ ನಿರ್ದೇಶನಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಆರೋಗ್ಯ ಸೌಧ, 6ನೇ ಮಹಡಿ, ಪಶ್ಚಿಮ ವಿಭಾಗ, ಮಾಗಡಿ ರಸ್ತೆ, ಬೆಂಗಳೂರು.

ದಿನಾಂಕ: 22-10-2021

**ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆ ಅನುಷ್ಠಾನ ಬಲಗೊಳಸಲು ಸಲಹೆ**

ಪೀಠಿಕೆ :- 2018 ನೇ ಇಸವಿಯಿಂದ ಪ್ರಾರಂಭಿಸಿ ಈವರೆಗೂ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಕಾರ್ಯಕ್ರಮವು ವೈದ್ಯರು ಮತ್ತು ಸಿಬ್ಬಂದಿಯವರ ಸಹಕಾರದಿಂದ ರಾಜ್ಯದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಸಲಾಗುತ್ತಿದೆ. ಪ್ರಾರಂಭಿಕ ತೊಡಕುಗಳನ್ನು ನಿವಾರಿಸಿಕೊಂಡು ಅರ್ಹ ಫಲಾನುಭವಿಗಳಗೆ ಶುಲ್ಕ ರಹಿತ ಉನ್ನತ ಮಟ್ಟದ ವೈದ್ಯಕೀಯ ಸೌಲಭ್ಯಗಳನ್ನು ಜನರಿಗೆ ತಲುಪಿಸಿದ ಕ್ಷಮತೆಗೆ ವೈದ್ಯರು ಮತ್ತು ಸಿಬ್ಬಂದಿ ಭಾಜನರಾಗಿರುತ್ತಾರೆ. ವಿಶೇಷವಾಗಿ ಕೋವಿಡ್-19 ಪಿಡುಗಿನ ಸಂಧರ್ಭದಲ್ಲಿ ಆರೋಗ್ಯ ಇಲಾಖೆಯ ಸೇವೆ ಸ್ಮರಣೀಯವಾಗಿರುತ್ತದೆ. ಆದರೂ ಸಹ ಯೋಜನೆ ಅಡಿಯಲ್ಲಿ ಸೇವೆಗಳನ್ನು ವಿಸ್ತರಿಸುವ ಅಗತ್ಯತೆ ಮತ್ತು ಅವಕಾಶ ವಿಫುಲವಾಗಿರುತ್ತದೆ. ಸರ್ವಾಜನಿಕರಿಗೆ ವಿಸ್ತೃತ ಸೇವೆ ನೀಡುವುದು ಮತ್ತು ಸಾಂಸ್ಥಿಕ ಚಿಕಿತ್ಸಾ ಸೌಲಭ್ಯಗಳನ್ನು ಉತ್ತಮ ಪಡಿಸುವುದು ಯೋಜನೆಯ ಪ್ರಮುಖ ಆಶಯಗಳಲೊಂದಾಗಿರುತ್ತದೆ. ಈ ದಿಕ್ಕಿನಲ್ಲಿ ಆಯುಷ್ಮಾನ್ ಭಾರತ್-ಆರೋಗ್ಯ ಗುರುತಿನ ಚೀಟಿ ವಿತರಣೆಯಿಂದ ಮತ್ತು ಚಿಕಿತ್ಸಾ ಶುಲ್ಕದ ಬಾಬ್ತು ಆರೋಗ್ಯ ರಕ್ಷಾ ಸಮಿತಿಗೆ ಸಂದಾಯವಾಗುವ (ವೈದ್ಯರು ಮತ್ತು ಸಿಬ್ಬಂದಿಗೆ ನಿಗದಿತ 30%ಪ್ರೋತ್ಸಾಹಧನ ಹೊರತುಪಡಿಸಿ) ಹಣ ಬಳಕೆ ಕುರಿತು ಸಲಹೆಗಳನ್ನು ಕೆಳಕಂಡಂತೆ ನೀಡಲಾಗಿದೆ.

ಸಲಹೆ:- ಅ). ಮಾಡಿ-

1. ಆಯುಷ್ಮಾನ್ ಭಾರತ್-ಆರೋಗ್ಯ ಗುರುತಿನ ಚೀಟಿ ವಿತರಣೆಯಿಂದ ಸಂಗ್ರಹವಾಗುವ ಶುಲ್ಕದಿಂದ ಯೋಜನೆಯ ಪ್ರಚಾರ ಮತ್ತು ಮಾಹಿತಿ ನೀಡಲು ಖರ್ಚು ಮಾಡಿ
2. ಆಸ್ಪತ್ರೆ ಯ ಒಳ ಮತ್ತು ಹೊರ ಆವರಣದಲ್ಲಿ, ಪ್ರಮುಖ ಜಾಗಗಳಲ್ಲಿ ಸಾರ್ವಜನಿಕರಿಗೆ ಗೋಚರಿಸುವಂತೆ ಯೋಜನೆಯಿಂದಾಗುವ ಪ್ರಯೋಜನಗಳು, ಆಘಾತಕಾರಿ ಚಿಕಿತ್ಸಾ ವೆಚ್ಚದಿಂದ ರಕ್ಷಣೆ, ಚಾಲ್ತಿ ಬಿಪಿಎಲ್ ಗುರುತಿನ ಚೀಟಿ ಹಾಗೂ ಆಭಾ-ಆಕ ಗುರುತಿನ ಚೀಟಿಯ ಪ್ರಾಮುಖ್ಯತೆ ಬಗ್ಗೆ ಸೂರ್ಯ ಫಲಕ(ಸನ್ ಬೋರ್ಡ್) ಮತ್ತು ವಿದ್ಯುನ್ಮಾನ ಫಲಕಗಳನ್ನು (ಎಲೆಕ್ಟ್ರಾನಿಕ್ ಡಿಸ್‌ಪ್ಲೆ ಬೋರ್ಡ್) ಅಳವಡಿಸಿರಿ.
3. ಚಿಕಿತ್ಸೆ ಮತ್ತು ರೋಗಿಗಳನ್ನು ಕೇಂದ್ರವನ್ನಾಗಿರಿಸಿ ಅಗತ್ಯ ಸೌಲಭ್ಯ, ಉಪಕರಣ, ತುರ್ತು ಔಷಧಿ, ಮುಂತಾದವುಗಳಗೆ ಈಗಾಗಲೆ ಆರೋಗ್ಯ ರಕ್ಷಾ ಸಮಿತಿ ಮಾರ್ಗ ಸೂಚಿಗಳಲ್ಲಿ ನೀಡಲಾಗಿರುವ ಸಲಹೆಗಳನ್ನನುಅರಿಸಿ ವೆಚ್ಚಮಾಡುವುದು.

ಆ). ಮಾಡಬೇಡಿ-

1. ಸಾಂಧರ್ಬಿಕ, ಪ್ರಾಸಂಗಿಕ, ದೈನಂದಿನ ವೆಚ್ಚಗಳಗೆ ಈ ಹಣವನ್ನು ಬಳಸಬೇಡಿ.
2. ವಾಹನಗಳಗೆ ಇಂಧನ, ಬಿಡಿಭಾಗಗಳು, ವಿದ್ಯುಚ್ಛಕ್ತಿ ಮತ್ತು ನೀರಿನ ಶುಲ್ಕ ಕಟ್ಟಡ ದುರಸ್ಥಿ, ಸುಣ್ಣ ಬಣ್ಣ ಬಳಯುವುದು ಮುಂತಾದ ಆಂತಿಕ ಕೆಲಸಗಳಗೆ ಬಳಸಬೇಡಿ.
3. ಆದರೆ ರೋಗಿಯ ರಕ್ಷಣೆ ಮತ್ತು ಪ್ರಾಣ ಉಳಸಲು ಮಾಡಿದ ಎಲ್ಲಾ ವೆಚ್ಚವು ಸಾರ್ಥಕ ವೆಚ್ಚವೆನಿಸುತ್ತದೆ.

12.11.21

12/11/2021

PTO

ಇ.) **ಸಮರ್ಥನೆ-** ಈಗಾಗಲೆ ನೀಡಲಾಗಿರುವ ಸರ್ಕಾರಿ ಆದೇಶಗಳು ಮತ್ತು ಮಾರ್ಗಸೂಚಿಗಳಲ್ಲಿರುವ ಯಾವುದೇ ಸಲಹೆ ನಿರಸನಗೊಳಿಸದೆ ಊರ್ಜಿತವಾಗಿರುತ್ತವೆ.

ಆಯುಕ್ತರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಇವರಿಗೆ,
ಎಲ್ಲಾ ಜಿಲ್ಲಾ ಶಸ್ತ್ರ ಚಿಕಿತ್ಸಕರು
ವೈದ್ಯಾಧೀಕ್ಷಕರು ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ
ಎಲ್ಲಾ ಜಿಲ್ಲಾ ಆಕುಕ ಅಧಿಕಾರಿಗಳು
ಎಲ್ಲಾ ವೈದ್ಯಾಧೀಕ್ಷಕರು,ಸಾರ್ವಜನಿಕ ಆಸ್ಪತ್ರೆ
ಎಲ್ಲಾ ತಾಲ್ಲೂಕು/ಸಮುದಾಯ ಆರೋಗ್ಯ ಕೇಂದ್ರ
ಆಡಳಿತ ವೈದ್ಯಾಧೀಕಾರಿಗಳು-ಜಿಲ್ಲಾ
ಆಕುಕ ಅಧಿಕಾರಿಗಳ ಮುಖಾಂತರ

ಅವಗಾಹನೆಗಾಗಿ:
ಪ್ರಧಾನ ಕಾರ್ಯದರ್ಶಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪ್ರತಿಯನ್ನು :

1. ಅಭಿಯಾನ ನೀರ್ದೇಶಕರು ರಾಷ್ಟ್ರಿಯ ಆರೋಗ್ಯ ಅಭಿಯಾನ
2. ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
3. ನಿರ್ದೇಶಕರು ವೈದ್ಯಕೀಯ ಶಿಕ್ಷಣ
4. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ವಿಶ್ವಸ್ಥ ಮಂಡಳಿ